18/10/23 ಪ್ರಾತಃಮುರುಳಿ ಓಂಶಾಂತಿ ಬಾಪ್ದಾದಾ ಮಧುಬನ

"ಮಧುರ ಮಕ್ಕಳೇ - ದೇಹದ ಸಂಬಂಧಗಳಲ್ಲಿ ಬಂಧನವಿದೆ, ಆದ್ದರಿಂದ ದುಃಖವಿದೆ, ಆತ್ಮದ ಸಂಬಂಧದಲ್ಲಿರುವಾಗ ಅಪಾರ ಸುಖವು ಸಿಗುವುದು, ಒಬ್ಬ ಮಾತಾಪಿತರ ನೆನಪಿರುತ್ತದೆ"

ಪ್ರಶ್ನೆ: ಯಾವ ನಶೆಯಲ್ಲಿದ್ದಾಗ ಮಾಯೆಯ ಮೇಲೆ ವಿಜಯ ಪಡೆಯುವ ಧೈರ್ಯವು ಬರುವುದು?

ಉತ್ತರ: ನಾವು ಕಲ್ಪ-ಕಲ್ಪವೂ ತಂದೆಯ ನೆನಪಿನಿಂದ ಮಾಯೆಯ ಮೇಲೆ ವಿಜಯಿಗಳಾಗಿ ವಜ್ರಸಮಾನರಾಗಿದ್ದೇವೆ. ಸ್ವಯಂ ಭಗವಂತನೇ ನಮ್ಮ ಮಾತಾಪಿತನಾಗಿದ್ದಾರೆ. ಇದೇ ಸ್ಮೃತಿ ಅಥವಾ ನಶೆಯಿಂದ ಧೈರ್ಯ ಬಂದುಬಿಡುತ್ತದೆ. ಧೈರ್ಯವನ್ನು ಇಟ್ಟುಕೊಳ್ಳುವ ಮಕ್ಕಳು ಅವಶ್ಯವಾಗಿ ವಿಜಯಿಗಳಾಗುತ್ತಾರೆ ಮತ್ತು ಸದಾ ಈಶ್ವರೀಯ ಸೇವೆಯಲ್ಲಿಯೇ ತತ್ಪರರಾಗಿರುತ್ತಾರೆ.

ಗೀತೆ: ನಿಮ್ಮನ್ನು ಕರೆಯಲು ಮನಸ್ಸು ಹಾತೊರೆಯುತ್ತಿದೆ......................

ಓಂ ಶಾಂತಿ. ದೇವಿ-ದೇವತೆಗಳ ಪೂಜಾರಿಗಳೇ ಪಾರಲೌಕಿಕ ತಂದೆ-ತಾಯಿಯನ್ನು ನೆನಪಂತೂ ಮಾಡುತ್ತಲೇ ಬಂದಿದ್ದಾರೆ ಮತ್ತು ನಮಗೆ ಭಕ್ತಿಯ ಫಲವನ್ನು ಕೊಡಲು ಆ ತಂದೆ-ತಾಯಿ ಅವಶ್ಯವಾಗಿ ಬರಬೇಕಾಗುವುದೆಂದು ಭಕ್ತರು ತಿಳಿದುಕೊಂಡಿದ್ದಾರೆ ಆದರೆ ತಂದೆ-ತಾಯಿ ಯಾರೆಂದು ಪಾಪ! ಭಕ್ತರಿಗೆ ತಿಳಿದೇ ಇಲ್ಲ. ಕರೆಯುತ್ತಾರೆ, ಇದರಿಂದಲೇ ಅವರ ಸಂಬಂಧವು ಅವಶ್ಯವಾಗಿ ಇದೆ ಎಂದು ಸಿದ್ಧವಾಗುತ್ತದೆ. ಒಂದಾಗಿದೆ ಲೌಕಿಕ ಸಂಬಂಧ, ಎರಡನೆಯದು ಪಾರಲೌಕಿಕ ಸಂಬಂಧ. ಲೌಕಿಕ ಸಂಬಂಧವಂತೂ ಅನೇಕ ಪ್ರಕಾರದ್ದಾಗಿದೆ. ಚಿಕ್ಕಪ್ಪ, ದೊಡ್ಡಪ್ಪ, ಮಾವ ಮುಂತಾದ ಸಂಬಂದಗಳೆಲ್ಲವೂ ಲೌಕಿಕ ಬಂಧನವಾಗಿದೆ ಆದ್ದರಿಂದ ಪರಮಪಿತ ಪರಮಾತ್ಮನನ್ನು ಕರೆಯುತ್ತಾರೆ. ಇದಂತೂ ಮಕ್ಕಳಿಗೆ ಗೊತ್ತಿದೆ - ಸತ್ಯಯುಗದಲ್ಲಿ ಯಾವುದೇ ಬಂಧನವಿರುವುದಿಲ್ಲ. ನಾವೀಗ ಬಂಧನದಲ್ಲಿದ್ದೇವೆ ತಮ್ಮ ಸಂಬಂಧದಲ್ಲಿ ಬರಲು ಇಚ್ಛಿಸುತ್ತೇವೆಂದು ಕರೆಯುತ್ತಾರೆ. ನಾವು ಅನೇಕ ಪ್ರಕಾರದ ಬಂಧನಗಳಲ್ಲಿ ಇದ್ದೇವೆಂದು ಭಕ್ತರಿಗೆ ಗೊತ್ತಿದೆ. ದೇಹದ ಸ್ಮೃತಿಯಿರುವ ಕಾರಣ ಬಹಳ ಬಂಧನವಿದೆ. ದೇಹೀ ಸಂಬಂಧದಿಂದ ಒಬ್ಬರೇ ಮಾತ್ಪಿತಾ ನೆನಪಿರುತ್ತಾರೆ. ಲೌಕಿಕ ಮತ್ತು ಪಾರಲೌಕಿಕ ತಂದೆಯನ್ನು ನೆನಪು ಮಾಡುವುದರಲ್ಲಿ ರಾತ್ರಿ-ಹಗಲಿನ ಅಂತರವಿದೆ. ಇದು ಶಾರೀರಿಕ ಬಂಧನವಾಗಿದೆ ಮತ್ತು ಅದು ಆತ್ಮಿಕ ಸಂಬಂಧವಾಗಿದೆ. ಶಾರೀರಿಕ ಸಂಬಂಧದಲ್ಲಿ ಸತ್ಯಯುಗದಲ್ಲಿರುತ್ತೀರಿ ಏಕೆಂದರೆ ಅಲ್ಲಿ ಸುಖದ ಸಂಬಂಧವೆಂದು ಹೇಳಲಾಗುತ್ತದೆ. ಇಲ್ಲಿ ದುಃಖದ ಬಂಧನವೆಂದೇ ಹೇಳಲಾಗುತ್ತದೆ ಇದಕ್ಕೆ ಸಂಬಂಧವೆಂದು ಹೇಳುವುದಿಲ್ಲ. ಈ ಮಾತುಗಳು ಮೊದಲು ಗೊತ್ತಿರಲಿಲ್ಲ, ಈಗ ತಿಳಿದುಕೊಂಡಿದ್ದೀರಿ. ಹೇ ಮಾತಾಪಿತರೇ ಬನ್ನಿ ಎಂದು ಅವಶ್ಯವಾಗಿ ಕರೆಯುತ್ತಿದ್ದರು. ತಂದೆಯಂತೂ ಅವಶ್ಯವಾಗಿ ಎಲ್ಲರಿಗೆ ಸುಖವನ್ನೇ ಕೊಡುತ್ತಾರೆ ಆದರೆ ತಂದೆಯು ಯಾವ ಸುಖವನ್ನು ಕೊಡುತ್ತಾರೆಂದು ಯಾರಿಗೂ ಗೊತ್ತಿಲ್ಲ. ಈಗ ತಂದೆಯೊಂದಿಗೆ ಸಂಬಂಧವಿದೆ, ಅವರಿಂದ ಸದಾ ಸುಖವು ಸಿಗುತ್ತದೆ. ಸುಖಕ್ಕೆ ಸಂಬಂಧ, ದುಃಖಕ್ಕೆ ಬಂಧನವೆಂದು ಹೇಳುತ್ತಾರೆ ಅಂದಾಗ ಮಕ್ಕಳು ಮಾತಾಪಿತರನ್ನು ಬಂದು ಮಧುರಾತಿ ಮಧುರ ಮಾತುಗಳನ್ನು ತಿಳಿಸಿ ಎಂದು ಕರೆಯುತ್ತಾರೆ. ಅವರು ಪರೋಕ್ಷವಾಗಿ ಕರೆಯುತ್ತಾರೆ, ನೀವು ಪ್ರತ್ಯಕ್ಷವಾಗಿ ಕರೆಯುತ್ತೀರಿ. ಹೇ ಪರಮಪಿತ ಪರಮಾತ್ಮ ಎಂದು ಅವರೂ ನೆನಪು ಮಾಡುತ್ತಾರೆ. ತಂದೆಯಿದ್ದಾರೆಂದಮೇಲೆ ಅವಶ್ಯವಾಗಿ ತಾಯಿಯೂ ಇರಬೇಕು ಇಲ್ಲವೆಂದರೆ ತಂದೆಯು ರಚಿಸುವುದಾದರೂ ಹೇಗೆ? ಶಿವತಂದೆಗೆ ಮಕ್ಕಳು ಪತ್ರವನ್ನು ಹೇಗೆ ಬರೆಯುತ್ತಾರೆ? ಶಿವತಂದೆಯೇ ನೇರವಾಗಿ ಓದಲು ಸಾಧ್ಯವಿಲ್ಲ ಆದ್ದರಿಂದಲೇ ಶಿವಬಾಬಾ ಥ್ರೂ ಬ್ರಹ್ಮಾ ಎಂದು ಬರೆಯುತ್ತಾರೆ. ಶಿವತಂದೆಯು ಅವಶ್ಯವಾಗಿ ಯಾವುದಾದರೂ ಶರೀರವನ್ನು ಧಾರಣೆ ಮಾಡುತ್ತಾರೆ. ಆತ್ಮಗಳು ಪರಮಾತ್ಮನಿಂದ ಬಹಳಕಾಲ ಅಗಲಿದ್ದರು ನಂತರ ಸದ್ಗುರು ಸಿಕ್ಕಿದಾಗ ಪುನಃ ಮಿಲನವಾಯಿತೆಂದು ಹಾಡುತ್ತಾರೆ. ಸದ್ಗುರುವೆಂದು ತಂದೆಗೆ ಹೇಳಲಾಗುತ್ತದೆ. ಅವರು ಸರ್ವರ ಸದ್ಗತಿದಾತನಾಗಿದ್ದಾರೆ. ಅವರು ಬಂದು ಈ ಶರೀರದಲ್ಲಿ ಪ್ರವೇಶ ಮಾಡುತ್ತಾರೆ ನಂತರ ಇವರಿಗೆ 84 ಜನ್ಮಗಳ ರಹಸ್ಯವನ್ನು ತಿಳಿಸುತ್ತಾರೆ. ಬ್ರಹ್ಮನ ದಿನ ಮತ್ತು ಬ್ರಹ್ಮನ ರಾತ್ರಿಯೆಂದು ಗಾಯನವಿದೆ. ಮೊದಲು ಪರಮಪಿತ ಪರಮಾತ್ಮ ರಚಯಿತನಾಗಿದ್ದಾರೆ, ಅವರು ಬ್ರಹ್ಮಾ, ವಿಷ್ಣು, ಶಂಕರನನ್ನು ರಚಿಸುತ್ತಾರೆ. ಅವಶ್ಯವಾಗಿ ಪರಮಪಿತ ಪರಮಾತ್ಮನು ಬ್ರಹ್ಮನ ರಾತ್ರಿಯನ್ನು ಬ್ರಹ್ಮನ ದಿನವನ್ನಾಗಿ ಮಾಡಲು ಬರುತ್ತಾರೆ. ಪ್ರಜಾಪಿತ ಬ್ರಹ್ಮನ ದಿನವೆಂದರೆ ಇದು ಪ್ರಜಾಪಿತ ಬ್ರಹ್ಮಾಕುಮಾರ-ಬ್ರಹ್ಮಾಕುಮಾರಿಯರ ದಿನವೂ ಆಯಿತು. ಸತ್ಯಯುಗ, ತ್ರೇತಾಯುಗಕ್ಕೆ ದಿನವೆಂದು, ದ್ವಾಪರ-ಕಲಿಯುಗಕ್ಕೆ ರಾತ್ರಿಯೆಂದು ಕರೆಯಲಾಗುತ್ತದೆ. ಈಗ ನೀವು ಮಕ್ಕಳು ತಂದೆಯಿಂದ ಸ್ವರ್ಗದ ಆಸ್ತಿಯನ್ನು ಪಡೆಯಲು ಬಂದಿದ್ದೀರಿ. ತ್ವಮೇವ ಮಾತಾಶ್ಚ ಪಿತಾ ಎಂದು ಅವರಿಗಾಗಿಯೇ ಹಾಡುತ್ತಾರೆ. ಸಖಿನ ರೂಪದಲ್ಲಿ ಹಗುರ ರೂಪದಲ್ಲಿ ಬಂದು ಖುಷಿಪಡಿಸುತ್ತಾರೆ. ಮುಖ್ಯವಾಗಿ ಮೂರು ಸಂಬಂಧಗಳಿವೆ - ತಂದೆ, ಶಿಕ್ಷಕ, ಸದ್ಗುರು. ಇದರಿಂದಲೇ ಲಾಭವಿದೆ ಬಾಕಿ ಚಿಕ್ಕಪ್ಪ, ದೊಡ್ಡಪ್ಪ, ಮಾವ ಮುಂತಾದ ಸಂಬಂಧಗಳ ಯಾವುದೇ ಮಾತಿಲ್ಲ. ಅಂದಾಗ ಯಾವ ಸಂಪೂರ್ಣ ತಂದೆಯಿದ್ದಾರೆಯೋ ಅವರು ಬಂದು ಮಕ್ಕಳನ್ನು ಸಂಪೂರ್ಣರನ್ನಾಗಿ ಮಾಡುತ್ತಾರೆ. ನೀವು 16 ಕಲಾ ಸಂಪೂರ್ಣರಾಗುತ್ತಿದ್ದೀರಿ, ಅನುಭವಿಗಳಾಗಿದ್ದೀರಿ. ಅನ್ಯರುಹೇಗೆ

ತಿಳಿದುಕೊಳ್ಳುತ್ತಾರೆ. ಎಲ್ಲಿಯವರೆಗೆ ನೀವು ಮಕ್ಕಳ ಸಂಗದಲ್ಲಿ ಬರುವುದಿಲ್ಲವೋ ಅಲ್ಲಿಯವರೆಗೆ ಅವರು ತಿಳಿಯಲು ಹೇಗೆ ಸಾಧ್ಯ.

ಈಗ ನಿಮಗೆ ಗೊತ್ತಿದೆ - ಭಕ್ತಿಮಾರ್ಗದಲ್ಲಿಯೂ ಬಂಧನವಿದೆ. ಯಾವಾಗ ರಾವಣರೂಪಿ ಪಂಚವಿಕಾರಗಳ ಬಂಧನದಲ್ಲಿ ಇರುತ್ತಾರೆಯೋ ಆಗಲೇ ನೆನಪು ಮಾಡುತ್ತಾರೆ. ತಂದೆಯ ಹೆಸರೇ ಮುಕ್ತಿದಾತ (ಲಿಬರೇಟರ್) ಎಂದಾಗಿದೆ. ಆಂಗ್ಲಭಾಷೆಯ ಶಬ್ಧವು ಬಹಳ ಚೆನ್ನಾಗಿದೆ. ತಂದೆಯು ಲಿಬರೇಟ್ ಮಾಡುತ್ತಾರೆ. ಮನುಷ್ಯರನ್ನೇ ಲಿಬರೇಟ್ ಮಾಡಲಾಗುತ್ತದೆ. ದುಃಖದಿಂದ, ಮಾಯೆಯ ಬಂಧನದಿಂದ ಬಿಡುಗಡೆ ಮಾಡಲು ಬರುತ್ತಾರೆ ನಂತರ ಮಾರ್ಗದರ್ಶಕನೂ ಆಗಿದ್ದಾರೆ. ಸೊಳ್ಳೆಗಳ ಸಮಾನ ಎಲ್ಲರನ್ನೂ ವಾಪಸ್ಸು ಕರೆದುಕೊಂಡು ಹೋಗುತ್ತಾರೆಂದು ಗೀತೆಯಲ್ಲಿಯೂ ಇದೆ ಅಂದಮೇಲೆ ಅವಶ್ಯವಾಗಿ ವಿನಾಶವೂ ಇದೆ. ಬ್ರಹ್ಮಾರವರ ಮೂಲಕ ಸ್ಥಾಪನೆ, ಶಂಕರನ ಮೂಲಕ ವಿನಾಶ ಮಾಡಿಸುತ್ತಾರೆಂದು ಗಾಯನವೂ ಇದೆ. ಯಾರು ಸ್ಥಾಪನೆ ಮಾಡುತ್ತಾರೆಯೋ ಅವರ ಮುಖಾಂತರ ಪಾಲನೆಯೂ ಆಗುತ್ತದೆ. ಈಗ ನೀವು ನಂಬರ್ವಾರ್ ಪುರುಷಾರ್ಥದ ಅನುಸಾರ ತಯಾರಾಗುತ್ತಿದ್ದೀರಿ. ದೇಹದ ಬಂಧನವನ್ನು ಬುದ್ಧಿಯಿಂದ ತೆಗೆಯಬೇಕು. ಸನ್ಯಾಸಿಗಳು ಗೃಹಸ್ಥವನ್ನು ಬಿಟ್ಟು ಓಡಿಹೋಗುತ್ತಾರೆ ಆದರೆ ನೀವು ಗೃಹಸ್ಥ ವ್ಯವಹಾರದಲ್ಲಿರುತ್ತಾ ರಾಜಯೋಗವನ್ನು ಕಲಿಯುತ್ತೀರಿ. ಜನಕನ ಉದಾಹರಣೆಯಿದೆಯಲ್ಲವೆ. ಅವರೇ ನಂತರ ಹೋಗಿ ಅನುಜನಕನಾದರು. ಅನೇಕ ಮಕ್ಕಳು ನಾವು ಜನಕನ ರೀತಿ ನಮ್ಮ ರಾಜಧಾನಿಯಲ್ಲಿರುತ್ತಾ ಜ್ಞಾನವನ್ನು ಪಡೆಯುತ್ತೇವೆಂದು ಹೇಳುತ್ತಾರೆ. ಹಾಗೆ ನೋಡಿದರೆ ಪ್ರತಿಯೊಬ್ಬರೂ ಅವರ ಮನೆಗೆ ರಾಜರಾಗಿದ್ದಾರೆ. ಮಾಲೀಕರಿಗೆ ರಾಜನೆಂದು ಕರೆಯಲಾಗುತ್ತದೆ. ತಂದೆ, ಅವರ ಸ್ತ್ರೀ, ಮಕ್ಕಳು ಮುಂತಾದವರಿದ್ದರೆ ಅದು ಹದ್ದಿನ ರಚನೆಯಾಯಿತು. ರಚನೆಯನ್ನೂ ಮಾಡುತ್ತಾರೆ, ಪಾಲನೆಯನ್ನೂ ಮಾಡುತ್ತಾರೆ ಬಾಕಿ ಸಂಹಾರ ಮಾಡುವುದಿಲ್ಲ ಏಕೆಂದರೆ ಸೃಷ್ಟಿಯು ವೃದ್ಧಿ ಹೊಂದಲೇಬೇಕಾಗಿದೆ. ಎಲ್ಲರೂ ಜನ್ಮ ಕೊಡುತ್ತಲೇ ಇರುತ್ತಾರೆ. ಕೇವಲ ಬೇಹದ್ದಿನ ತಂದೆಯೇ ಬಂದು ಹೊಸ ರಚನೆಯನ್ನು ರಚಿಸುತ್ತಾರೆ ಮತ್ತು ಹಳೆಯದರ ವಿನಾಶ ಮಾಡಿಸುತ್ತಾರೆ. ಹೊಸ ಸೃಷ್ಟಿಯ ಸ್ಥಾಪನೆ ಮತ್ತು ಹಳೆಯದರ ವಿನಾಶವನ್ನು ಬ್ರಹ್ಮಾ, ವಿಷ್ಣು, ಶಂಕರನ ರಚಯಿತನಾದ ಪರಮಪಿತ ಪರಮಾತ್ಮನೇ ಮಾಡುತ್ತಾರೆ. ಈ ಮಾತುಗಳನ್ನು ನೀವು ಮಕ್ಕಳು ಚೆನ್ನಾಗಿ ತಿಳಿದುಕೊಳ್ಳುತ್ತೀರಿ. ಮಾತುಗಳಂತೂ ಬಹಳ ಸಹಜವಾಗಿದೆ. ಇದರ ಹೆಸರೇ ಇಡಲಾಗಿದೆ - ಸಹಜಯೋಗ ಅಥವಾ ನೆನಪು. ಭಾರತದ ಜ್ಞಾನ ಅಥವಾ ಯೋಗವು ಹೆಸರುವಾಸಿಯಾಗಿದೆ.

ತಂದೆಯು ಈಗ ನೀವು ಮಕ್ಕಳಿಗೆ ದೈವೀ ಮತವನ್ನು ಕೊಡುತ್ತಾರೆ. ಇದರಿಂದ ನೀವು ಸದಾ ಹರ್ಷಿತರಾಗಿರುತ್ತೀರಿ. ಮಾತಾಪಿತರಿಂದಲೇ ಹೊಸಸೃಷ್ಟಿಯ ರಚನೆಯಾಗುತ್ತದೆ. ನಮ್ಮನ್ನು ಭಗವಂತನೇ ಸೃಷ್ಟಿಸಿದರೆಂದು ಎಲ್ಲರಿಗೂ ಗೊತ್ತಿದೆ ಆದರೆ ಭಗವಂತನು ಬಂದು ಹೇಗೆ ಹೊಸಸೃಷ್ಟಿಯನ್ನು ರಚಿಸುತ್ತಾರೆ, ಹೊಸ ಸೃಷ್ಟಿಯನ್ನು ದತ್ತು ಮಾಡಿಕೊಳ್ಳುತ್ತಾರೆಂದು ನೀವೀಗ ತಿಳಿದುಕೊಂಡಿದ್ದೀರಿ. ಮಾತಾಪಿತರಂತೂ ಅವಶ್ಯವಾಗಿ ಇದ್ದಾರೆ. ತಂದೆಯು ತಾನೇ ಇವರ ಮುಖಾಂತರ ದತ್ತು ಮಾಡಿಕೊಳ್ಳುತ್ತಾರೆಂದರೆ ಇವರು ದೊಡ್ಡ ತಾಯಿ ಯಾದರು ನಂತರ ಮೊದಲನೆಯದಾಗಿ ಸರಸ್ವತಿಯನ್ನು ದತ್ತು ತೆಗೆದುಕೊಂಡಿದ್ದಾರೆ. ತಂದೆಯು ಇವರಲ್ಲಿ ಪ್ರವೇಶ ಮಾಡಿದ್ದಾರಲ್ಲವೆ. ಈ ಮಮ್ಮಾರವರಂತೂ ದತ್ತು ಮಗುವಾಗಿದ್ದಾರೆ. ನಿಮಗೋಸ್ಕರ ಮಾತಾಪಿತಾ ಆಗಿದ್ದಾರೆ. ಆದರೆ ನನಗೆ ಪತಿಯೂ ಆದರು, ಪಿತನೂ ಆದರು. ನನ್ನಲ್ಲಿ ಪ್ರವೇಶ ಮಾಡಿ ನನ್ನನ್ನು ತಮ್ಮ ಪತ್ನಿಯಾಗಿ ಮಾಡಿಕೊಂಡಿದ್ದಾರೆ ಮತ್ತು ಮಗುವನ್ನಾಗಿಯೂ ಮಾಡಿಕೊಂಡಿದ್ದಾರೆ. ಇವಂತೂ ರಮಣೀಕವಾದ ಮಾತುಗಳಾಗಿವೆ, ಸಮ್ಮುಖದಲ್ಲಿ ಕೇಳುವಂತಹ ಮಾತುಗಳಾಗಿವೆ. ನಿಮ್ಮಲ್ಲಿಯೂ ಸಹ ನಂಬರ್ವಾರ್ ಆಗಿ ತಿಳಿದುಕೊಳ್ಳುತ್ತಾರೆ. ಒಂದುವೇಳೆ ಎಲ್ಲರೂ ತಿಳಿದುಕೊಂಡರೆ ನಂತರ ಅವರು ತಿಳಿಸಲೂ ಬೇಕು. ತಿಳಿಸುವುದಿಲ್ಲವೆಂದರೆ ಅವರು ಏನೂ ತಿಳಿದುಕೊಂಡಿಲ್ಲವೆಂದರ್ಥ. ಜಡಬೀಜದಿಂದ ವೃಕ್ಷವು ಹೇಗೆ ಬರುತ್ತದೆ ಎಂಬುದನ್ನಂತೂ ಯಾರಾದರೂ ತಕ್ಷಣ ತಿಳಿಸಬಲ್ಲರು ಆದರೆ ಈ ಬೇಹದ್ದಿನ ವೃಕ್ಷದ ಜ್ಞಾನವನ್ನು ಎಲ್ಲಿಯವರೆಗೆ ತಂದೆಯು ಬಂದು ತಿಳಿಸುವುದಿಲ್ಲವೋ ಅಲ್ಲಿಯವರೆಗೂ ಯಾರೂ ತಿಳಿದುಕೊಳ್ಳಲು ಸಾಧ್ಯವಿಲ್ಲ. ನಾವು ತಂದೆಯಿಂದ ರಾಜಯೋಗವನ್ನು ಕಲಿತು ಆಸ್ತಿಯನ್ನು ಪಡೆಯುತ್ತಿದ್ದೇವೆ ಎಂದು ನೀವು ಮಕ್ಕಳಿಗೆ ತಿಳಿದಿದೆ ಅಂದಮೇಲೆ ಇದು ಬುದ್ಧಿಯಲ್ಲಿರಬೇಕಾಗಿದೆ. ಇದು ಡಬಲ್ ಸಂಬಂಧವಾಗಿದೆ. ಅಲ್ಲಂತೂ ಕೇವಲ ಒಂದು ಸಂಬಂಧವಿರುತ್ತದೆ. ಪಾರಲೌಕಿಕ ತಂದೆಯನ್ನು ನೆನಪು ಮಾಡುವುದಿಲ್ಲ. ಇಲ್ಲಿ ಅವೆಲ್ಲವೂ ಬಂಧನವಾಗಿದೆ. ಈ ಸಮಯದಲ್ಲಿ ನಾವು ಆ ಬಂಧನದಲ್ಲಿದ್ದೇವೆ, ತಂದೆಯ ಸಂಬಂಧದಲ್ಲಿ ಆ ಬಂಧನದಿಂದ ಬಿಡುಗಡೆ ಆಗುವುದಕ್ಕೋಸ್ಕರ ಬಂದಿದ್ದೇವೆಂದು ನೀವು ಮಕ್ಕಳು ತಿಳಿಯುತ್ತೀರಿ. ಇತ್ತೀಚಿನ ದಿನಗಳಲ್ಲಂತೂ ಎಷ್ಟೊಂದು ಮತಗಳಾಗಿಬಿಟ್ಟಿವೆ. ಪರಸ್ಪರ ಜಗಳವಾಡುತ್ತಾ-ಹೊಡೆದಾಡುತ್ತಿರುತ್ತಾರೆ. ನೀರಿಗಾಗಿ, ಭೂಮಿಗಾಗಿಯೂ ಹೊಡೆದಾಡುತ್ತಿರುತ್ತಾರೆ. ಇದು ನಮ್ಮ ಹದ್ದಿನಲ್ಲಿದೆ, ಇದು ನಿಮ್ಮ ಹದ್ದಿನಲ್ಲಿಲ್ಲ ಎಂದು ಹೊಡೆದಾಡುತ್ತಾರೆ. ಈಗ ಸಂಪೂರ್ಣವಾಗಿ ಹದ್ದಿನಲ್ಲಿ ಬಂದುಬಿಟ್ಟಿದ್ದಾರೆ. ಭಾರತವಾಸಿಗಳು ಸತ್ಯಯುಗದಲ್ಲಿ ಬೇಹದ್ದಿನ ಮಾಲೀಕರಾಗಿದ್ದರು ಎಂಬುದನ್ನೇ ಮರೆತುಹೋಗಿದ್ದಾರೆ. ಯಾರು ಮಾಲೀಕರಾಗಿದ್ದರೋ ಅವರೇ ನಂತರ ಮರೆತುಹೋಗುತ್ತಾರೆ. ಮರೆಯುವುದೂ ಸಹ ಅವಶ್ಯವಾಗಿದೆ ಆಗಲೇ ಪುನಃ ತಂದೆಯು ಬಂದು ತಿಳಿಸುತ್ತಾರೆ. ಈ ಮಾತುಗಳನ್ನು ಈಗ ನೀವು ತಿಳಿದುಕೊಂಡಿದ್ದೀರಿ. ಲೌಕಿಕದಲ್ಲಿ ಬಂಧನವಿದೆ ಆದರೆ ಇಲ್ಲಿ ಮಾತಾಪಿತರೊಂದಿಗೆ ಸಂಬಂಧವಿದೆ. ನಾವು ಶ್ರೀಮತದಂತೆ ನಡೆದು ಅಪಾರ ಸುಖದ ಆಸ್ತಿಯನ್ನು ಪಡೆಯುತ್ತಿದ್ದೇವೆಂದು ನಿಮಗೆ ಗೊತ್ತಿದೆ. ತಂದೆಯು ತಿಳಿಸುತ್ತಾರೆ - ನಾನು ನಿಮಗೆ ಸುಖದ ಆಸ್ತಿಯನ್ನು ಕೊಡುತ್ತೇನೆ ನಂತರ ಶಾಪವನ್ನು ಕೊಡುವವರು ಯಾರು? ಮಾಯಾ ರಾವಣ. ಶಾಪದಲ್ಲಿ

ದುಃಖವಿದೆ, ಆಸ್ತಿಯಲ್ಲಂತೂ ಸುಖವಿರುತ್ತದೆ. ಮನುಷ್ಯರಿಗೆ ದುಃಖದ ಆಸ್ತಿಯನ್ನು ಯಾರು ಕೊಡುತ್ತಾರೆಂದು ಮನುಷ್ಯರಿಗೆ ಗೊತ್ತಿಲ್ಲ. ತಂದೆಯು ಸತ್ಯಯುಗವನ್ನು ಸ್ಥಾಪನೆ ಮಾಡುತ್ತಾರೆಂದರೆ ಅವಶ್ಯವಾಗಿ ಸುಖದ ಆಸ್ತಿಯನ್ನೇ ಕೊಡುತ್ತಾರೆ. ತಂದೆಯನ್ನು ದುಃಖದ ಆಸ್ತಿ ಕೊಡುವವರೆಂದು ಹೇಳುತ್ತಾರೆಯೇ! ಶತ್ರುಗಳೇ ದುಃಖವನ್ನು ಕೊಡುತ್ತಾರೆ ಆದರೆ ಈ ಮಾತುಗಳನ್ನು ಯಾರೂ ತಿಳಿದುಕೊಂಡಿಲ್ಲ. ಎಲ್ಲಿಯ ಮಾತನ್ನು ಎಲ್ಲಿಗೆ ತೆಗೆದುಕೊಂಡು ಹೋಗಿದ್ದಾರೆ. ಲಂಕೆಯು ಲೂಟಿಯಾಗುತ್ತದೆ, ಚಿನ್ನವನ್ನು ತೆಗೆದುಕೊಂಡು ಬರುತ್ತಾರೆಂದು ಹೇಳುತ್ತಾರೆ. ಆದರೆ ಚಿನ್ನವನ್ನು ಯಾವುದೇ ಶ್ರೀಲಂಕಾದಲ್ಲಿ ಇಟ್ಟಿಲ್ಲ. ಚಿನ್ನವು ಗಣಿಗಳಿಂದಲೇ ಸಿಗುತ್ತದೆ. ಕೆಲವೊಂದೆಡೆ ನದಿಗಳಿಂದಲೂ ಸಿಗುತ್ತದೆ.

ಮಕ್ಕಳು ತಿಳಿದುಕೊಂಡಿದ್ದೀರಿ - ಇದು ಅನಾದಿ ವಿಶ್ವನಾಟಕವಾಗಿದೆ. ಇದು ನೀವು ಮಕ್ಕಳ ಬುದ್ಧಿಯಲ್ಲಿ ನಂಬರ್ವಾರ್ ಪುರುಷಾರ್ಥದ ಅನುಸಾರ ಕುಳಿತಿದೆ. ಯಾರು ತಾನೂ ತಿಳಿದುಕೊಂಡಿಲ್ಲ, ಅನ್ಯರಿಗೂ ತಿಳಿಸುವುದಿಲ್ಲವೆಂದರೆ ಅವರು ಯಾವ ಪದವಿಯನ್ನು ಪಡೆಯಬಹುದು! ಅಂತಹವರು ವಿದ್ಯಾವಂತರ ಮುಂದೆ ತಲೆಬಾಗಿಸುತ್ತಾರೆ. ರಾಜ-ರಾಣಿ ಮತ್ತು ಪ್ರಜೆಗಳಲ್ಲಿ ಅಂತರವಂತೂ ಇರುತ್ತದೆಯಲ್ಲವೆ. ಹೇಗೆ ಮಮ್ಮಾ-ಬಾಬಾರವರು ಹೋಗಿ ಉತ್ತಮ ಪದವಿಯನ್ನು ಪಡೆಯುತ್ತಾರೆಯೋ ಹಾಗೆಯೇ ತಾವೂ ಸಹ ಪುರುಷಾರ್ಥ ಮಾಡಿ ಇಷ್ಟು ಚೆನ್ನಾಗಿ ಓದಿ, ಮಮ್ಮಾ-ಬಾಬಾರವರ ಸಿಂಹಾಸನದಲ್ಲಿ ಕುಳಿತುಕೊಳ್ಳಿ. ಬಹಳ ಪ್ರಲೋಭನೆ ನೀಡಲಾಗುತ್ತದೆ ಏಕೆಂದರೆ ಇದು ರಾಜಯೋಗವಾಗಿದೆ. ನೀವು ರಾಜಯೋಗದಿಂದ ರಾಜ್ಯಭಾಗ್ಯವನ್ನಾದರೂ ಪ್ರಾಪ್ತಿ ಮಾಡಿಕೊಳ್ಳಿ, ಕಡಿಮೆಗಿಂತ ಕಡಿಮೆ ಪುರುಷಾರ್ಥದಿಂದ ಪ್ರಜೆಗಳಂತೂ ಆಗುತ್ತೀರಿ. ಯಾವಾಗಲೂ ಫಾಲೋ ಫಾದರ್ ಎಂದು ಹೇಳಲಾಗುವುದು. ನೀವು ಮಕ್ಕಳಾಗಿದ್ದೀರಲ್ಲವೆ. ಅವರು ತಂದೆ (ಶಿವಬಾಬಾ), ನಂತರ ಇವರು ತಂದೆ ಮತ್ತು ಇಲ್ಲಿ ತಾಯಿಯೂ ಇದ್ದಾರೆ. ನಂಬರ್ವನ್ ಅನುಸರಿಸುತ್ತಿದ್ದಾರೆ. ನೀವು ಸಹೋದರ-ಸಹೋದರಿಯರಾಗಿದ್ದೀರಿ. ತಂದೆಯಂತೂ ಒಬ್ಬರೇ ಇರಬೇಕು. ಎಲ್ಲರೂ ಓ ಪರಮಪಿತ ಪರಮಾತ್ಮನೇ ಎಂದು ಹೇಳುತ್ತಾರೆಂದರೆ ಎಲ್ಲರೂ ಸಹೋದರ-ಸಹೋದರಿಯರಾದರು. ಯಾವುದೇ ಹೆಚ್ಚಿನ ಸಂಬಂಧವಿಲ್ಲ, ಸಹೋದರ-ಸಹೋದರಿಯರಷ್ಟೇ. ಆ ಮನುಷ್ಯರ ತಂದೆ, ತಾತ, ಸಹೋದರ-ಸಹೋದರಿಯರಂತೂ ಅನೇಕರಿರುತ್ತಾರೆ. ಆದರೆ ಇಲ್ಲಿ ತಂದೆಯೂ ಒಬ್ಬರೇ ಆಗಿದ್ದಾರೆ, ಒಬ್ಬರೇ ತಾತನಿದ್ದಾರೆ. ಪ್ರಜಾಪಿತ ಬ್ರಹ್ಮಾರವರ ಮೂಲಕ ರಚನೆಯನ್ನು ರಚಿಸಲಾಗುತ್ತದೆ. ನೀವು ಸಹೋದರ-ಸಹೋದರಿಯರೇ ನಂಬರ್ವಾರ್ ಪುರುಷಾರ್ಥದ ಅನುಸಾರವಾಗಿ ಪದವಿಯನ್ನು ಪಡೆಯುತ್ತೀರಿ. ನಂತರ ಹೋಗಿ ತಮ್ಮ-ತಮ್ಮ ಸ್ಥಾನದಲ್ಲಿ ನಿಲ್ಲುತ್ತೀರಿ. ನೆಲೆಯಂತೂ ಇದೆಯಲ್ಲವೆ. ಅಲ್ಲಿಂದ ಪುನಃ ನಂಬರ್ವಾರ್ ಬರುತ್ತೀರಿ. ಇಲ್ಲಿ ಜೀವನ-ಬಂಧನವಾಗಿದೆ, ಆತ್ಮಗಳು ಅಲ್ಲಿಂದ ಮೊದಲು ಸುಖದಲ್ಲಿ ಬರುತ್ತಾರೆ ಆದ್ದರಿಂದ ಮೊದಲು ಜೀವನ್ಮುಕ್ತಿಯಿರುತ್ತದೆ. ಮೊಟ್ಟಮೊದಲು ಸ್ವರ್ಗದಲ್ಲಿ ಭಾರತವಾಸಿಗಳ ಜೀವನ್ಮುಕ್ತಿಯಿರುತ್ತದೆ. ಎಷ್ಟು ಒಳ್ಳೊಳ್ಳೆಯ ಮಾತುಗಳನ್ನು ತಂದೆಯು ತಿಳಿಸುತ್ತಾರೆ. ನನ್ನವರಂತೂ ಒಬ್ಬ ಸರ್ವೋತ್ತಮ ಶಿಕ್ಷಕರ ವಿನಃ ಮತ್ಯಾರೂ ಇಲ್ಲ, ಕನ್ಯೆಯರು ಹೇಳುತ್ತಾರೆ ನನ್ನವರು ಒಬ್ಬ ಶಿವತಂದೆಯ ವಿನಃ ಮತ್ಯಾರೂ ಇಲ್ಲ. ಕನ್ಯೆಯರು ಇದರಲ್ಲಿ ಪೂರ್ಣ ಗಮನ ಕೊಡಬೇಕು. ಈ ಸರ್ಕಾರದವರಾಗಿದ್ದೇವೆ ಅಂದಮೇಲೆ ಈಶ್ವರೀಯ ಸೇವೆಯಲ್ಲಿ ತೊಡಗಬೇಕು. ಪುನಃ ಅಸುರೀ ಸೇವೆಯನ್ನು ಹೇಗೆ ಮಾಡಲು ಸಾಧ್ಯ? ಪ್ರತಿಯೊಬ್ಬರ ಕರ್ಮಬಂಧನದ ಅನುಸಾರವಾಗಿ ಸಲಹೆ ಕೊಡಲಾಗುತ್ತದೆ. ಇವರು ಬರಲು ಸಾಧ್ಯವೋ ಅಥವಾ ಇಲ್ಲವೋ ಎಂದು ನೋಡಲಾಗುತ್ತದೆ. ಒಳ್ಳೆಯ ತೀಕ್ಷ್ಣ ಬುದ್ಧಿಯಿದ್ದಲ್ಲಿ ಪುನಃ ಕೇವಲ ಈಶ್ವರೀಯ ಸೇವೆಯೊಂದೇ ಆಗಿಬಿಡುವುದು. ನೀವು ಮಕ್ಕಳದು ಈಶ್ವರೀಯ ಸೇವೆಯಾಗಿದೆ. ನಿರ್ವಿಕಾರಿಯನ್ನಾಗಿ ಮಾಡುವಂತಹ ಸೇವೆಯಾಗಿದೆ. ನಾವು ಸೇನೆಯಾಗಿದ್ದೇವೆ, ಗಾಡ್ ನಮಗೆ ಮಾಯೆಯೊಂದಿಗೆ ಯುದ್ಧ ಮಾಡುವುದನ್ನು ಕಲಿಸುತ್ತಾರೆ. ರಾವಣನು ಎಲ್ಲದಕ್ಕಿಂತಲೂ ಹಳೆಯ ಶತ್ರುವಾಗಿದ್ದಾನೆ, ಇದನ್ನು ನೀವು ಮಕ್ಕಳಷ್ಟೇ ತಿಳಿದುಕೊಂಡಿದ್ದೀರಿ. ನೀವು ರಾವಣನ ಮೇಲೆ ವಿಜಯಿಗಳಾಗಿ ವಜ್ರಸಮಾನರಾಗುವಿರಿ. ಮಕ್ಕಳಿಗೆ ಆ ಧೈರ್ಯ, ನಶೆಯಿರಬೇಕಾಗಿದೆ. ಮನುಷ್ಯರಂತೂ ಜಗಳವಾಡುತ್ತಾ ಇರುತ್ತಾರೆ, ಎಲ್ಲಿ ನೋಡಿದರೂ ಅಲ್ಲಿ ಜಗಳವೇ ಜಗಳವಿದೆ. ನಮಗೆ ಯಾರೊಂದಿಗೂ ಜಗಳವಿಲ್ಲ. ತಂದೆ ಹೇಳುತ್ತಾರೆ - ನನ್ನನ್ನು ನೆನಪು ಮಾಡುವುದರಿಂದ ವಿಕರ್ಮ ವಿನಾಶವಾಗುತ್ತದೆ. ಮಾಯೆಯ ಯುದ್ಧವಾಗುವುದಿಲ್ಲ. ನಂತರ ಅಸ್ತಿಯನ್ನು ನೆನಪು ಮಾಡಿರಿ. ಇದನ್ನು ಯಾರಿಗಾದರೂ ತಿಳಿಸಬೇಕಲ್ಲವೆ. ತಂದೆಯ ಪರಿಚಯವನ್ನು ಕೊಟ್ಟು ಅವರೊಂದಿಗೆ ಬುದ್ಧಿಯೋಗವನ್ನು ಜೋಡಿಸಬೇಕು. ಇವರು ನಮ್ಮ ಮಾತಾಪಿತರಾಗಿದ್ದಾರೆ. ಶಿವ ತಂದೆಯಾಗಿದ್ದಾರೆಂದರೆ ನಿಮ್ಮ ತಾಯಿ ಯಾರು? ಎಂಬುದನ್ನು ತಿಳಿಸಿ. ಇವು ಎಷ್ಟೊಂದು ಗುಹ್ಯವಾದ ಮಾತುಗಳಾಗಿವೆ. ನೀವು ಕೇಳುತ್ತೀರಿ - ಆತ್ಮದ ತಂದೆ ಯಾರು? ಅದಕ್ಕೆ ಪರಮಾತ್ಮ ಎಂದು ಬರೆದುಬಿಡುತ್ತಾರೆ. ಒಳ್ಳೆಯದು. ಹಾಗಾದರೆ ತಾಯಿ ಯಾರು? ಮಾತೆಯ ವಿನಃ ಮಕ್ಕಳನ್ನು ಹೇಗೆ ರಚಿಸುತ್ತಾರೆ? ನಂತರ ಜಗದಂಬೆಯ ಕಡೆಗೆ ಹೊರಟುಹೋಗುತ್ತಾರೆ, ಒಳ್ಳೆಯದು ಹಾಗಾದರೆ ಜಗದಂಬೆಯನ್ನು ಹೇಗೆ ರಚಿಸಿದರು. ಇದೂ ಸಹ ಯಾರಿಗೂ ತಿಳಿದಿಲ್ಲ. ನೀವು ತಿಳಿದಿದ್ದೀರಿ - ಬ್ರಹ್ಮಾನ ಮಗಳು ಸರಸ್ವತಿಯಾಗಿದ್ದಾಳೆ, ಅವರು ಮುಖವಂಶಾವಳಿಯಾಗಿದ್ದಾರೆ. ರಚಯಿತನಂತೂ ತಂದೆಯೇ ಆಗಿದ್ದಾರೆ. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವಂತಹ ಮಕ್ಕಳಿಗೆ ಪ್ರೀತಿಯ ಮಾತಾ-ಪಿತಾ ಬಾಪ್ದಾದಾರವರ ನೆನಪು ಪ್ರೀತಿ ಹಾಗೂ ಸುಪ್ರಭಾತ. ಆತ್ಮೀಯ ಮಕ್ಕಳಿಗೆ ಆತ್ಮೀಯ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ನನಗಂತೂ ಒಬ್ಬ ಸರ್ವೋತ್ತಮ ಶಿಕ್ಷಕನ ವಿನಃ ಮತ್ತ್ಯಾರೂ ಇಲ್ಲ, ಈ ನಿಶ್ಚಯದಿಂದ ಮಾತಾಪಿತರ ಸಮಾನ ವಿದ್ಯೆಯನ್ನು ಓದಬೇಕು. ಪುರುಷಾರ್ಥದಲ್ಲಿ ಸಂಪೂರ್ಣವಾಗಿ ಅನುಸರಿಸಬೇಕು.

2. ದೇಹದ ಬಂಧನವನ್ನು ಬುದ್ಧಿಯಿಂದ ತೆಗೆದುಹಾಕಿ, ದೈವೀ ಮತದಂತೆ ನಡೆದು ಸದಾ ಹರ್ಷಿತರಾಗಿರಬೇಕಾಗಿದೆ. ಈಶ್ವರೀಯ ಸೇವೆ ಮಾಡಬೇಕಾಗಿದೆ.

ವರದಾನ: ದೂರ ಹೋಗುವ ಬದಲು ಸ್ವಯಂ ಅಡ್ಜೆಸ್ಟ್ ಆಗುವಂತಹ ಸಹನಶೀಲತೆಯ ಅವತಾರ ಭವ

ಕೆಲವು ಮಕ್ಕಳಲ್ಲಿ ಸಹನ ಶಕ್ತಿಯ ಕೊರತೆ ಇರುವುದು ಆದ್ದರಿಂದ ಏನೇ ಸಣ್ಣ ಮಾತು ಬಂದರೂ ಸಹಾ ಮುಖ ಲಕ್ಷಣ ಬಹಳ ಬೇಗ ಬದಲಾವಣೆಯಾಗಿಬಿಡುವುದು, ನಂತರ ಗಾಬರಿಯಾಗಿ ಇಲ್ಲಾ ಸ್ಥಾನ ಬದಲಾಯಿಸಲು ಯೋಚಿಸುತ್ತಾರೆ ಇಲ್ಲಾ ಯಾವುದರಿಂದ ತೊಂದರೆ ಆಯಿತು ಅದನ್ನೇ ಬದಲಾಯಿಸಿ ಬಿಡುತ್ತಾರೆ, ಆದರೆ ತಾವು ಬದಲಾಗಲ್ಲ. ಆದರೆ ಬೇರೆಯವರನ್ನು ದೂರ ಮಾಡುತ್ತಾರೆ ಆದ್ದರಿಂದ ಸ್ಥಾನ ಅಥವಾ ಬೇರೆಯವರನ್ನು ಬದಲಿಸುವ ಬದಲು ಸ್ವಯಂ ಅನ್ನು ಬದಲಿಸಿಕೊಳ್ಳಿ, ಸಹನಶೀಲತೆಯ ಅವತಾರ ಆಗಿರಿ. ಎಲ್ಲರ ಜೊತೆ ಸ್ವಯಂ ಅಡ್ಜೆಸ್ಟ್ ಮಾಡಿಕೊಳ್ಳುವುದನ್ನು ಕಲಿಯಿರಿ.

ಸ್ಲೋಗನ್: ಪಾರಮಾರ್ಥದ ಆಧಾರದಿಂದ ವ್ಯವಹಾರವನ್ನು ಸಿದ್ಧ ಮಾಡುವುದು-ಇದೇ ಯೋಗಿಯ ಲಕ್ಷಣವಾಗಿದೆ.